# ಗಮಕ ದುಂದುಭಿ

ಪರಿಷತ್ತಿನ ತ್ರೈಮಾಸಿಕ ಪತ್ರಿಕೆ

ಸಂಪುಟ: 34 ಸಂಚಿಕೆ: 01 ಜನವರಿ - 2018

ಕುಮಾರವ್ಯಾಸ ಜಯಂತಿಯ ಶುಭಾಶಯಗಳೊಂದಿಗೆ



## ವೀರನಾರಾಯಣನೆ ಕವಿ, ಲಿಪಿಕಾರ ಕುವರವ್ಯಾಸ..

# ಗಮಕ ಶಿಕ್ಷಣ– ಒಂದು ಅವಲೋಕನ



ವಿ. ಡಾ. ಜ್ಯೋತಿಶಂಕರ್
ಮೈಸೂರು

ಗಮಕ ಒಂದು ಪ್ರಾಚೀನ ಕಲೆ. ಗಮಕವೆಂದರೆ – ಓದುವುದು, ವಾಚನ ಮಾಡುವುದು ಎಂದರ್ಥ. ಗಮಕಿ–ಪದಕ್ಕೆ ವಾಚಕ, ಲಿಪಿಯನ್ನೋದುವವನು ಎನ್ನುವ ಅರ್ಥವಿದೆ. ಕಾವ್ಯಗಳನ್ನು ಕರ್ತೃವಿನ ಭಾವಕ್ಕೆ ವಿರೋಧಬಾರದ ರೀತಿಯಲ್ಲಿ ಯಥಾವತ್ತಾಗಿ, ಅರ್ಥಗರ್ಭಿತವಾಗಿ, ಭಾವರಸ ಪೂರಕವಾಗಿ, ರಾಗವಾಗಿ ಓದುವುದರ ಮೂಲಕ ಶ್ರೋತೃಗಳ ಕಣ್ಮನಕ್ಕೆ ಕಟ್ಟುವಂತೆ ಕಾಣಿಸುವುದು ಗಮಕ ಕಲೆಯಲ್ಲಿ ಅತಿಮುಖ್ಯ ಉದ್ದೇಶ. ಸುಮಾರು ಕ್ರಿ.ಶ. ೧ನೆಯ ಶತಮಾನದಲ್ಲಿಯೆ 'ವಾತ್ಸಾಯನ' ೬೪ ಕಲೆಗಳ ಬಗ್ಗೆ ವಿವರಿಸುವಾಗ ೩೧ನೆಯ ಕಲೆಯನ್ನು 'ಪುಸ್ತಕ ವಾಚನಂ' ಎಂದು ತಿಳಿಸಿದ್ದಾನೆ. ಸಾಕಷ್ಟು ಸತ್ವ, ಮೌಲ್ಯ, ಸೌಂದರ್ಯವನ್ನು ಮೇಳೈಸಿಕೊಂಡಿರುವಂತಹ ಕಲೆಯಿದು. ಬಹು ಪ್ರಾಚೀನ ಕಾಲದಿಂದಲೇ ವಾಚನ ಮಾಡುವಂತಹ ಪದ್ಧತಿ ನಮ್ಮ ಭಾರತೀಯ ಪರಂಪರೆಯಲ್ಲಿ ಬೆಳೆದು ಬಂದಿತ್ತೆನ್ನಬಹುದು. ಅದಕ್ಕಾಗಿಯೇ ಲವಕುಶರನ್ನು ಆದಿ ಗಮಕಿಗಳೆಂದು ಕರೆಯುತ್ತಾರೆ. ವಾಲ್ಮೀಕಿ ಲವ–ಕುಶರ ಮೂಲಕವೇ ರಾಮಾಯಣದಂತಹ ಅದ್ಭುತ ಕಾವ್ಯವನ್ನು ವಾಚನ ಮಾಡಿಸಿದರೆನ್ನುವ ಉಲ್ಲೇಖಗಳು ದೊರೆಯುತ್ತವೆ. ಅದನ್ನು ಕವಿ ಲಕ್ಷ್ಮೀಶ ತನ್ನ ಜೈಮಿನಿ ಭಾರತದಲ್ಲಿ ಸೊಗಸಾಗಿ ವರ್ಣಿಸುತ್ತಾನೆ.

*ವೀಣೆಯಂ ಕೈಗಿತ್ತು ಬಾಲಕರ ವದನದೊಳ್*
*ವಾಣಿತಾಂ ನೆಲಸಿದಳೊ ಗಾನದೇವತೆಯ ಮೈ*
*ಗಾಣಿಕೆಯೊ ಮೋಹನದ ತನಿರಸವೊ ಸೊಗಯಿಸುವ ಕರ್ಣಾಮೃತವೊ ಪೇಳೆನೆ*
*ಜಾಣುಣ್ಮೆ ಜೋಕೆಯಿಂ ಜತಿ ರೀತಿ ತಾಳ ಪ್ರ*
*ಮಾಣ ಕಂಪಿತ ಮೂರ್ಛೆ ರಸ ಪಾಡು ಬೆಡಗು ಬಿ*
*ನ್ನಾಣ ಲಯಮಾಹತ ಪ್ರತ್ಯಾಹತವ್ಯಾಪ್ತಿಗಳನರಿದು ಪಾಡ್ದರವರು*

ಕಾವ್ಯಗಳಲ್ಲಿ, ಶಾಸನಗಳಲ್ಲಿ ಬಹಳ ಹಿಂದಿನ ಕಾಲದಿಂದಲೂ ಗಮಕ ಒಂದು ಉತ್ತಮ ಕಲೆಯಾಗಿ ಉತ್ತುಂಗ ಸ್ಥಿತಿಯಲ್ಲಿದ್ದದ್ದು ತಿಳಿದು ಬರುತ್ತದೆ. 'ಕವಿ ಗಮಕಿವಾದಿವಾಗ್ಮಿ ಪ್ರಿಯಂ' ಕ್ರಿ.ಶ. ೧೦೬೮ರ ಮಹಾ ಮಂಡಳೇಶ್ವರ ಗಂಗರಸನ ಒಂದು ಶಾಸನ. ಹಾಗೆಯೇ ಆದಿಕವಿ ಪಂಪನ ವಿಕ್ರಮಾರ್ಜುನವಿಜಯದಲ್ಲೂ ಗಮಕದ ಉಲ್ಲೇಖವಿದೆ.

*ಕವಿ ಗಮಕಿ ವಾದಿವಾಗ್ಮಿ*
*ಪ್ರವರವ ಪಂಡಿತರ ನೆಗಳ್ದ ಮಾತರಿವರ _ _ _*

ಇಂತಹ ಒಂದು ಸಮೃದ್ಧವಾದ, ಮಾನ್ಯತೆ ಪಡೆದಿದ್ದ ಕಲೆಯೊಂದು ಇಂದು ಅವನತಿಯ ಅಂಚಿಗೆ ಬಂದು ನಿಂತಿದೆ. ಒಟ್ಟಾರೆಯಾಗಿ ಇಡೀ ಭಾರತೀಯ ಸಂಸ್ಕೃತಿಯೇ ಒಂದು ಪರ್ವಕಾಲದಲ್ಲಿದೆ. ಯುವಜನರು ಹಿರಿಯ ತಲೆಮಾರಿನ ಸಂಸ್ಕೃತಿಯ ವಾಹಕರಂತೆ, ಉತ್ತರಾಧಿಕಾರಿಗಳಂತೆ ಕಾಣುವ ಬದಲಾಗಿ ವಿಮುಖರಾಗುತ್ತ ನಡೆಯುತ್ತಿರುವುದು ಎಲ್ಲರ ಕಣ್ಣಿಗೆ ಕಾಣುತ್ತಿರುವಂತಹ ಒಂದು ಅಹಿತಕರ, ಅಪಾಯಕಾರಿ ಬೆಳವಣಿಗೆಯಾಗಿದೆ. ಲಲಿತಕಲೆಗಳಲ್ಲಿ ಒಂದಾಗಿರುವ ಗಮಕ ಕಲೆಯೆಡೆಗೆ ಯುವ ಪೀಳಿಗೆಯನ್ನು ಆಕರ್ಷಿಸಿ ಅದರ ಸೌಂದರ್ಯ, ಸುಖ, ಮೌಲ್ಯಗಳನ್ನು ತಿಳಿಹೇಳುವುದು ಕನ್ನಡಿಗರೆಲ್ಲರ ಪ್ರಮುಖ ಕರ್ತವ್ಯವಾಗಬೇಕು.

ಇಷ್ಟಕ್ಕೂ ಗಮಕದಂತಹ ಒಂದು ಸುಂದರ ಕಲೆ ಹಿಂದೆ ಸರಿಯಲು ಕಾರಣಗಳೇನೆಂಬುದನ್ನು ಮೊದಲು ಗಂಭೀರವಾಗಿ ಆಲೋಚಿಸಬೇಕು. ಹಾಗೆ ಗಮನಿಸಿದಾಗ ಕಣ್ಣಿಗೆ ಬೀಳುವ ಪ್ರಮುಖ ಕಾರಣಗಳೆಂದರೆ

೧. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ
೨. ನಾಡು ನುಡಿ– ನೆಲ–ಜಲದ ಬಗೆಗಿನ ಪ್ರೀತಿ ಕಾಣೆಯಾಗುತ್ತಿರುವುದು
೩. ಕಲೆಯ ಪ್ರಯೋಜನವನ್ನು ಹಣದ ಮಾನದಂಡದಿಂದ ಅಳೆಯುವುದು

ಇವು ಮುಖ್ಯ ಕಾರಣಗಳಾದರೂ ಇದಕ್ಕೆ ಪೂರಕವಾಗಿ ಹಲವು ಕಾರಣಗಳು ಒತ್ತಾಸೆಯಾಗಿರುವುದು ಕಂಡುಬರುತ್ತದೆ. ಕನ್ನಡ ಭಾಷೆಯ ಪ್ರಾಥಮಿಕ ಅರಿವೂ ಇಲ್ಲದ ಮಕ್ಕಳು (ಆಂಗ್ಲ ಮಾಧ್ಯಮದ ಪ್ರಭಾವ) ಗಮಕದ ಪದ್ಯಗಳನ್ನು ಅರ್ಥಮಾಡಿಕೊಳ್ಳುವುದು ದುಸ್ತರವೇ ಸರಿ. ಕಳೆದ ಹತ್ತಾರು ವರ್ಷಗಳಿಂದ ಗಮಕ ಬೋಧನೆ ಮಾಡುವಾಗ ಎದುರಾದ ಮೊಟ್ಟ ಮೊದಲ ತೊಡಕೆಂದರೆ ಭಾಷೆಯದು. ಮಾತೃಭಾಷೆ, ಪರಿಸರ ಎರಡೂ ಕನ್ನಡವಾಗಿದ್ದರೂ ಮಕ್ಕಳ ಕನ್ನಡ ಜ್ಞಾನ ಬಹಳ ಕಡಿಮೆಯೇ ಎನಿಸುತ್ತದೆ. ಎತ್ತು, ಮಾಡು (ಮೇಲ್ಛಾವಣಿ) ಇಂತಹ ಸಣ್ಣ ಪುಟ್ಟ ಪದಗಳೇ ಅವರ ಅರಿವಿಗೆ ಸಿಗದಿದ್ದಾಗ, ದೊಡ್ಡ ವಾಕ್ಯಗಳ, ಪದ ಪುಂಜಗಳ ಅರ್ಥ ತಿಳಿಯುವುದು ದೂರದ ಮಾತೇ ಸರಿ. ಅದರ ಜೊತೆಗೆ ಅರ್ಥವಾಗದಂತಹ ವಿಷಯಗಳನ್ನು ಆಂಗ್ಲ ಭಾಷೆಯಲ್ಲಿ ತಿಳಿ ಹೇಳುವಂತಹ ಅನಿವಾರ್ಯ ಪರಿಸ್ಥಿತಿಯೂ ಇಲ್ಲಿ ಉಂಟಾಗಿಬಿಟ್ಟಿದೆ. ನಮ್ಮ ಭಾಷೆ, ಸಂಸ್ಕೃತಿಯ ವಿಷಯಗಳನ್ನು ಅರ್ಥ ಮಾಡಿಸಲು ಪರಭಾಷೆಯ ಮೇಲೆ ಅವಲಂಬಿತವಾಗಬೇಕಾದಂತಹ ಶೋಚನೀಯ ಸ್ಥಿತಿ ನಿರ್ಮಾಣವಾಗುತ್ತಿದೆ. ಭಾಷೆಯ ಸರಿಯಾದ ಕಲಿಯುವಿಕೆಗೆ ತಂದೆ–ತಾಯಿಗಳ ಪ್ರೋತ್ಸಾಹವೂ ಅಷ್ಟೇ ಅಗತ್ಯವಾಗಿರುವಂತಹುದು. ವಿಪರ್ಯಾಸವೆಂದರೆ ಅವರಿಗೆ ಕನ್ನಡ ಕಲಿಸಬೇಕೆಂಬ ತುಡಿತವೂ




**ಡಾ. ವಿಜಯ ಸಂಕೇಶ್ವರ**
ಚೇರ್ಮನ್

**ಆನಂದ ಸಂಕೇಶ್ವರ**
ವ್ಯವಸ್ಥಾಪಕ ನಿರ್ದೇಶಕರು

**ಚನ್ನೇಗೌಡ ಕೆ.ಎನ್.**
ಸಂಪಾದಕ

**ಅರುಣ್ ಕರಡಿ**
ಉಪಾಧ್ಯಕ್ಷ, ಜಾಹೀರಾತು ವಿಭಾಗ

**ಸಂಜೀವ್ ಕುಲಕರ್ಣಿ**
ಉಪಾಧ್ಯಕ್ಷ, ಜಾಹೀರಾತು ವಿಭಾಗ

**ರಾಘವೇಂದ್ರ ಗಣಪತಿ**
ಡೆಪ್ಯೂಟಿ ಎಡಿಟರ್

**ನಾಗರಾಜ ಇಳೆಗುಂಡಿ**
ಡೆಪ್ಯೂಟಿ ಎಡಿಟರ್

**ಸಂಚಿಕೆ ನಿರ್ವಹಣೆ**
ಪ್ರಭುದೇವ ಶಾಸ್ತ್ರೀಮಠ
ರಾಜಶೇಖರ ಜೋಗಿನ್ಮನೆ

**ನೆರವು**
ವೀರಣ್ಣ ಜಿ.
ದ.ಕೋ.ಹಳ್ಳಿ ಚಂದ್ರಶೇಖರ
ಸುಚೇತನಾ ನಾಯ್ಕ
ರವೀಂದ್ರ ಮಾವಖಂಡ

**ವಿನ್ಯಾಸ**
ನವೀನ್‌ಕುಮಾರ್ ಕೆ.ಎಲ್.

**ಪನ್‌ಲೈನ್ 'ಪನ್'ಡಿತರು**
ರವಿಕಾಂತ ಕುಂದಾಪುರ, ಆದರ್ಶ ಅಂಚಿ


Editor: CHANNEGOWDA K N. Published by CHANNEGOWDA K N on behalf of VRL Media Limited, No.24, 1st & 3rd Floor, Sri Sairam Towers, 5th Main, K P Puttanna Chetty Road, Chamarajpet, Bangalore560 018 and printed by him at M/s Rajhans Enterprises, No. 134, 4th Main Road, Industrial Town, Rajajinagar, Bangalore 44. All rights reserved. Reproduction in whole or in part without written permission is prohibited. email: editor@vijayavani.in., Ph: 08026257400, Fax: 080 26257464.

ವಿಜಯವಾಣಿ ದೀಪಾವಳಿ ವಿಶೇಷಾಂಕ 2018




ಬದುಕ ಬೆಳಗುವ ದೀವಿಗೆ 10
| ಡಾ. ಜ್ಯೋತಿ ಶಂಕರ್

ಕಥಾಯಾನ



ಮೀ ಟೂ...
| ನಾಗತಿಹಳ್ಳಿ ಚಂದ್ರಶೇಖರ 16



ರೆಕ್ಕೆ ಇದ್ದರೆ ಸಾಕೆ...?
| ಅನುಪಮಾ ಮಂಗಳವೇಢೆ 80



ಅನುರಣನ
| ವಿಕ್ರಂ ಹತ್ವಾರ್ 42

# ಬದುಕ ಬೆಳಗುವ ದೀವಿಗೆ



ಡಾ. ಜ್ಯೋತಿ ಶಂಕರ್
ಕನ್ನಡ ಪ್ರಾಧ್ಯಾಪಕರು, ಮೈಸೂರು

ವರುಷಕೆ ಬರುವುದು ಅರಸು ದೀಪಾವಳಿ
ಅರಿಶಿನವನದ್ದೀ ಮಡಿಯುಟ್ಟು-ಮಂಡೆಯ ಕಟ್ಟಿ
ಗೋವಿಗಾರತಿಯಾ ಬೆಳಗ್ಯಾರೇ

ಭಾರತದಾದ್ಯಂತ ವರ್ಗ-ವರ್ಣಗಳ ಭೇದವಿಲ್ಲದೆ ಹಿರಿ-ಕಿರಿಯರೆಲ್ಲ ಒಟ್ಟಾಗಿ ಸೇರಿ ಸಂಭ್ರಮದಿಂದ ಆಚರಿಸುವ ಹಬ್ಬ ದೀಪಾವಳಿ. ಈ ಹಬ್ಬದ ರೀತಿಯೇ ವಿಶಿಷ್ಟ ಬಗೆಯದು. ಪೂಜೆ-ವಿನೋದ-ಭೋಜನ-ಹೊಸ ಬಟ್ಟೆ-ಪಟಾಕಿ.. ಹೀಗೆ ಸಂಭ್ರಮ ಸಾಲುಗಟ್ಟುತ್ತದೆ. ಅವಳಿ ಎಂದರೆ ಸಾಲು, ದೀಪಗಳ ಸಾಲು, ದೀಪದ ಪರಂಪರೆಯನ್ನು ಮುಂದುವರಿಸುತ್ತದೆ. ಮುಂದೆ ಕಾರ್ತಿಕಮಾಸದ ಕೊನೆಯಲ್ಲಿ ಬರುವ ಶಿವದೀಪೋತ್ಸವ, ವಿಷ್ಣುದೀಪೋತ್ಸವ, ಕಾರ್ತಿಕ ದೀಪೋತ್ಸವಕ್ಕೆ ದೀಪಾವಳಿ ನಾಂದಿ ಹಾಡುತ್ತದೆ. ಕೃತಕ ದೀಪಗಳ ಮಾಲೆಯನ್ನು, ಕಣ್ಣು ಕೋರೈಸುವಿಕೆಯನ್ನು ಪಕ್ಕಕ್ಕೆ ಸರಿಸಿ, ಸಹಜ ಪ್ರಕಾಶದಿಂದ ಬೆಳಗುವ ದೀವಿಗೆಗಳ ರೀತಿ ಕಣ್ಣಿಗೂ ತಂಪನ್ನೀಯುತ್ತದೆ.

ಈ ಹಬ್ಬಕ್ಕೇ ಏಕೆ ದೀಪಾವಳೀ ಎಂಬ ವಿಶೇಷ ಹೆಸರು? ಎಂದರೆ ಇದು ಬಹುಮುಖವಾಗಿ ಹಾಗೂ ಬಹುದಿನಗಳ ಕಾಲ ದೀಪಮಾಲೆಗಳನ್ನು ಹೊಂದಿರುವ ಹಬ್ಬ. ಕಾರ್ತಿಕದೀಪೋತ್ಸವದಲ್ಲಿ ವಿಶೇಷವಾಗಿರುವ ದೀಪ ಬೆಳಗಿಸುವ ಸಮರಂಭಕ್ಕೂ ಈ ದೀಪಾವಳಿಯ ದೀಪ ಹಚ್ಚುವ ಸಮಾರಂಭವೇ ನಾಂದಿಯಾಗಿರುತ್ತದೆ.

ದೀಪಾವಳಿಪರ್ವವು ಒಂದೇ ದಿನಕ್ಕೆ ಸೀಮಿತವಾಗಿರದೆ ನಾಲ್ಕೈದು ದಿನಗಳ ಕಾಲ ವಿಸ್ತಾರಗೊಂಡು ಅಷ್ಟು ದಿನಗಳಲ್ಲೂ ದೀಪ ಬೆಳಗಿಸಲ್ಪಡುತ್ತವೆ. ಉತ್ಸವದಲ್ಲಿ ಮಹಾವಿಷ್ಣುವಿನ ನರಕಾಸುರನ ವಧೆ ಮತ್ತು ಬಲೀಂದ್ರ ವಿಜಯಗಳ ಪೂಜೆ , ಮಹಾಲಕ್ಷ್ಮಿಯ ಪೂಜೆ, ಮಹಾದೇವನ ಪೂಜೆ, ಮಹಾರಾತ್ರಿ ಪೂಜೆ, ಕುಬೇರಪೂಜೆ, ಯಮಧರ್ಮರಾಜನ ಪೂಜೆ, ಗೋಪೂಜೆ, ಗೋವರ್ಧನ ಪೂಜೆ ಮುಂತಾದ ಎಲ್ಲ ಪೂಜಾಪ್ರಕರಣಗಳಲ್ಲೂ ದೀಪಗಳು ಬೆಳಗಿಸಲ್ಪಡುತ್ತವೆ.

# ಸಾಂಸ್ಕೃತಿಕ ಸೊಬಗಿನ ಮೈಸೂರು



ವಿಕ್ರಮ

ವಿಶೇಷ ಸಂಚಿಕೆ

# ಮೈಸೂರಿನ ದಿವಾನರು

ಡಾ. ಜ್ಯೋತಿಶಂಕರ್, ಮೈಸೂರು

ಭಾರತವೆಂದರೆ ಅನೇಕ ವಿಶೇಷಗಳ ಮೊತ್ತ. ಅಂತಹ ವಿಶೇಷಗಳು ಕಲೆ-ಸಂಸ್ಕೃತಿ-ಆಡಳಿತ-ಸಮಾಜ ಎಲ್ಲ ಕಡೆಯೂ ಸಂಭವಿಸಿದೆ. ಅವುಗಳೆಲ್ಲವೂ ಸರ್ವಮಾನ್ಯವೇ. ಅಂತಹ ನೆನೆಯಲೇಬೇಕಾದ ಮೌಲ್ಯಗಳ ಸರಣಿಯಲ್ಲಿ ಬರುವವರು "ಮೈಸೂರಿನ ದಿವಾನರು". 'ದಿವಾನ್' ಎನ್ನುವ ಶಬ್ದ ಕೇಳಿದಾಕ್ಷಣ ನೆನಪಾಗುವುದೇ ದಿವಾನ್ ಪೂರ್ಣಯ್ಯನವರು ತಮ್ಮ ಕಾರ್ಯಕ್ಷಮತೆಯಿಂದಲೇ ಇಂದಿಗೂ ಜನಮಾನಸದಲ್ಲಿ ನೆಲೆಯೂರಿದ್ದಾರೆ. ಮೈಸೂರಿನ ರಾಜ್ಯ ಪುನರ್ ಪ್ರತಿಷ್ಠೆಯಾದಾಗ ಅಲ್ಲಿನ ಆಡಳಿತ ಸುಗಮವಾಗಿ ನಡೆಯಲು (1881ರಿಂದ 1941ರವರೆಗೆ) ಕಾರಣರಾದವರು ಹನ್ನೊಂದು ಮಂದಿ. ಅವರ ಕಾರ್ಯವೈಖರಿಯನ್ನು ಇಂದು ನೆನಪಿಸಿಕೊಳ್ಳಲೇಬೇಕು.





## ಸಿ. ರಂಗಾಚಾರ್ಲು (25.03.1881ರಿಂದ 20.01.1883)

ರಂಗಾಚಾರ್ಯರೆಂದೇ ಪ್ರಸಿದ್ಧರಾದ ಚೆಟ್ಟಿಪುಣ್ಯಂ ರಂಗಾಚಾರ್ಯರು ಮಹತ್ತರವಾದ ಆಲೋಚನಾಶಕ್ತಿಯುಳ್ಳವರು. ಅವರು 1881ರಲ್ಲಿ ಸ್ಥಾಪಿಸಿದ ಪ್ರಜಾಪ್ರತಿನಿಧಿ ಸಭೆ ರಾಜ್ಯ ಪ್ರಗತಿಗೆ ಬಹುಮಟ್ಟಿಗೆ ಕಾರಣವಾಯಿತು. ಅವರಿಗೆ ಎರಡೇ ಉದ್ದೇಶಗಳಿದ್ದು, ಒಂದು ಪ್ರಜಾಶಕ್ತಿಯ ಅಭಿವೃದ್ಧಿ, ಮತ್ತೊಂದು ಖರ್ಚನ್ನು ತಗ್ಗಿಸಿ ಆರ್ಥಿಕ ಸಂಪತ್ತನ್ನು ಹೆಚ್ಚಿಸಿಕೊಳ್ಳುವುದು. ಇದಕ್ಕಾಗಿ ಅವರು ಮಾಡಿದ ಪ್ರಯತ್ನಗಳು ಒಂದೆರಡಲ್ಲ. ಅರಣ್ಯ ಸಂಪತ್ತಿನ ಉಪಯೋಗ, ಬಟ್ಟೆ ಕಾರ್ಖಾನೆಗಳ ಸ್ಥಾಪನೆಯಾಗಬೇಕು ಇತ್ಯಾದಿ, ಬೆಂಗಳೂರು-ತಿಪಟೂರು ರೈಲು ಕಾಮಗಾರಿಯನ್ನು ಆರಂಭಿಸಿದ್ದಲ್ಲದೇ, ಬೆಂಗಳೂರು-ಮೈಸೂರು ರೈಲು ಕಾಮಗಾರಿಯನ್ನು ಪೂರ್ಣಗೊಳಿಸಿದರು. ಆಡಳಿತದ ಜೊತೆಯಲ್ಲಿಯೇ ಕನ್ನಡದ ಅಭಿಮಾನವನ್ನು ಬೆಳೆಸಿಕೊಂಡಿದ್ದ ಈ ದಿವಾನರ ಶ್ರಮದಿಂದಲೇ 'ಶಾಕುಂತಲ ನಾಟಕ ಕಂಪನಿ, ಬಾಲಿಕಾ ಗೀತ ಮುಕ್ತ ಕಲಾಪ'ದಂತಹ ಸಭೆಗಳಾಗಿ ಉತ್ಕೃಷ್ಟ ಗೀತೆಗಳ ರಚನೆಯಾಗಿ, ಬಸವಪ್ಪ ಶಾಸ್ತ್ರಿಗಳಂತಹವರು ಶಾಕುಂತಲವನ್ನು ಕನ್ನಡದಲ್ಲಿ ತರಲು ಸಾಧ್ಯವಾಯಿತು.